ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3669
ಸದಸ್ಯರ ಹೆಸರು : ಶ್ರೀ ಸುನಿಲ್‌ಕುಮಾರ್
ಶ್ರೀ ರಾಮಲಿಂಗಾರೆಡ್ಡಿ ಪ್ರಾಥಮಿಕ
ಹಾಗೂ ಪ್ರೌಢಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
ಅ	ಉಡುಪಿ ಜಿಲ್ಲೆಯಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳು ಎಷ್ಟು, (ತಾಲ್ಲೂಕುವಾರು, ಸ್ಥಳವಾರು ವಿವರ ನೀಡುವುದು)	34 ತಾಲ್ಲೂಕುವಾರು, ಸ್ಥಳವಾರು ಕಾಲೇಜುಗಳ ಪಟ್ಟಿ ಲಗತ್ತಿಸಿದೆ.
ಆ	ಈ ಕಾಲೇಜುಗಳಿಗೆ ಅಗತ್ಯ ಉಪನ್ಯಾಸಕ ಹಾಗೂ ಉಪನ್ಯಾಸಕೇತರ ಸಿಬ್ಬಂದಿಗಳು ಇರುವರೇ?	ಕೊರತೆ ಇದೆ.
ಇ	ಇಲ್ಲದಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?	ಖಾಲಿ ಇರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಹತ್ತಿರದ ಕಾಲೇಜುಗಳಲ್ಲಿ ಕಡಿಮೆ ಕಾರ್ಯಭಾರವಿರುವ 34 ವಿವಿಧ ವಿಷಯಗಳ ಉಪನ್ಯಾಸಕರನ್ನು ನಿಯೋಜಿಸುವ

	ಪ್ರಶ್ನೆ	ಉತ್ತರ
		ಮೂಲಕ ಕೊರತೆ ನೀಗಿಸಿದೆ. ಪದವಿ ಕಾಲೇಜುಗಳಲ್ಲಿರುವ ಅರೆಕಾಲಿಕ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಪರಿಶೀಲನೆಯಲ್ಲಿದ್ದು ಹಾಗೂ ಸಹ ಶಿಕ್ಷಕರುಗಳಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದ್ದು, ಬಂದ ನಂತರ ಭರ್ತಿ ಮಾಡಲಾಗುವುದು. ಬೋಧಕೇತರ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದೆ.
ಈ	ಕಾರ್ಕಳದ ಯಾವ ಯಾವ ಪದವಿ ಪೂರ್ವಕಾಲೇಜುಗಳಲ್ಲಿ ಉಪನ್ಯಾಸಕರ ಯಾವ ಯಾವ ವಿಷಯದ ಹುದ್ದೆಗಳು ಖಾಲಿ ಇವೆ ಹಾಗೂ ಯಾವಾಗಿನಿಂದ ಖಾಲಿ ಇವೆ?	ಪಟ್ಟಿ ಲಗತ್ತಿಸಿದೆ.
ಉ	ಇಷ್ಟು ದಿನ ಖಾಲಿ ಇರಲು ಕಾರಣಗಳೇನು?	ವಯೋನಿವೃತ್ತಿ ಬಡ್ತಿ ಮತ್ತು ವರ್ಗಾವಣೆಗಳಿಂದಾಗಿ ಈ ಹುದ್ದೆಗಳು ಖಾಲಿ ಇವೆ.
ಊ	ಹಾಗಿದ್ದರೆ, ಇವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು	ಬಡ್ತಿಗಾಗಿ ಮೀಸಲಿರುವ ವಿವಿಧ ವಿಷಯಗಳ 399 ಹುದ್ದೆಗಳನ್ನು ಪ್ರೌಢಶಾಲಾ ಸಹ ಶಿಕ್ಷಕರಿಗೆ ಸ್ಥಾನಪನ್ನ ಬಡ್ತಿ ನೀಡುವ ಮೂಲಕ ತುಂಬಲು ಡಿ.ಪಿ.ಸಿ. ಸಭೆಯು ನಡೆದಿದ್ದು ವಿತವ್ಯಯ ಆದೇಶ

	ಪ್ರಶ್ನೆ	ಉತ್ತರ
		ಸಡಿಲಿಕೆಗಾಗಿ ಆರ್ಥಿಕ ಇಲಾಖೆಯ ಸಹಮತಿ ಕೋರಿದೆ. ಪದವಿ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವಾ ವಿಲೀನಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಆ ನಂತರ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇರೆಗೆ ತುಂಬಲು ಪರಿಶೀಲಿಸಲಾಗುವುದು.

ಉಡುಪಿ ಜಿಲ್ಲೆಯ ತಾಲ್ಲೂಕುವಾರು ಮತ್ತು ಸ್ಥಳವಾರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಉಡುಪಿ ತಾಲ್ಲೂಕು

1. ಸರ್ಕಾರಿ ಪದವಿ ಪೂರ್ವ ಕಾಲೇಜು, ಫಲಿಮಾರು
2. ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಜಮಾಡಿ
3. ಸರ್ಕಾರಿ ಪದವಿ ಪೂರ್ವ ಕಾಲೇಜು, ಹಿರಿಯಡ್ಕ
4. ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆಮ್ಮಣ್ಣು
5. ಸರ್ಕಾರಿ ಪದವಿ ಪೂರ್ವ ಕಾಲೇಜು, ಉಡುಪಿ
6. ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾಪು ಮುಲ್ಕಿ
7. ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಕ್ಕರ್ಹೆ
8. ಸರ್ಕಾರಿ ಪದವಿ ಪೂರ್ವ ಕಾಲೇಜು, ಮಲ್ಪೆ
9. ಸರ್ಕಾರಿ ಪದವಿ ಪೂರ್ವ ಕಾಲೇಜು, ಯೆರಮಾಳು ಬಾಡ
10. ಸರ್ಕಾರಿ ಪದವಿ ಪೂರ್ವ ಕಾಲೇಜು, ಪಡುಬಿದ್ರಿ
11. ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳ್ವೆ
12. ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಉಡುಪಿ
13. ಸರ್ಕಾರಿ ಪದವಿ ಪೂರ್ವ ಕಾಲೇಜು, ಮುದರಂಗಡಿ

ಕಾರ್ಕಳ ತಾಲ್ಲೂಕು

1. ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾರ್ಕಳ
2. ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳ್ಮಣ್ಣು

3. ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಬ್ರಿ
4. ಸರ್ಕಾರಿ ಪದವಿ ಪೂರ್ವ ಕಾಲೇಜು, ಬೈಲೂರು
5. ಸರ್ಕಾರಿ ಪದವಿ ಪೂರ್ವ ಕಾಲೇಜು, ಮಣಿಯಾಲು
6. ಸರ್ಕಾರಿ ಪದವಿ ಪೂರ್ವ ಕಾಲೇಜು, ಬಜಗೋಳಿ
7. ಸರ್ಕಾರಿ ಪದವಿ ಪೂರ್ವ ಕಾಲೇಜು, ಪಳ್ಳಿ
8. ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಕ್ಕುಜೆ
9. ಸರ್ಕಾರಿ ಪದವಿ ಪೂರ್ವ ಕಾಲೇಜು, ಸಾಣೂರು

ಕುಂದಾಪುರ ತಾಲ್ಲೂಕು

1. ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಂದಾಪುರ
2. ಸರ್ಕಾರಿ ಪದವಿ ಪೂರ್ವ ಕಾಲೇಜು, ಶಂಕರನಾರಾಯಣ
3. ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಂದೂರು
4. ಸರ್ಕಾರಿ ಪದವಿ ಪೂರ್ವ ಕಾಲೇಜು, ನಾವುಂದ
5. ಸರ್ಕಾರಿ ಪದವಿ ಪೂರ್ವ ಕಾಲೇಜು, ಕೋಟೇಶ್ವರ
6. ಸರ್ಕಾರಿ ಪದವಿ ಪೂರ್ವ ಕಾಲೇಜು, ಉಪ್ಪುಂದ
7. ಸರ್ಕಾರಿ ಪದವಿ ಪೂರ್ವ ಕಾಲೇಜು, ತಕ್ಕಟ್ಟೆ
8. ಸರ್ಕಾರಿ ಪದವಿ ಪೂರ್ವ ಕಾಲೇಜು, ವಾಂಡ್ಸೆ
9. ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿದ್ಕಲ್‌ಕಟ್ಟೆ
10. ಸರ್ಕಾರಿ ಪದವಿ ಪೂರ್ವ ಕಾಲೇಜು, ಕಂಬದಕೋಣೆ
11. ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊಸಂಗಡಿ
12. ಸರ್ಕಾರಿ ಪದವಿ ಪೂರ್ವ ಕಾಲೇಜು, ಶಿರೂರು

ಉಡುಪಿ ಜಿಲ್ಲೆಯ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು ಮತ್ತು ಸ್ಥಳ	ಖಾಲಿ ಹುದ್ದೆಗಳ ವಿವರ		
		ವಿಷಯ	ಯಾವ ದಿನಾಂಕದಿಂದ ಖಾಲಿ ಇದೆ	ಖಾಲಿಯಾದ ಬಗ್ಗೆ
1.	ಸರ್ಕಾರಿ ಪದವಿ ಪೂರ್ವ ಕಾಲೇಜು ಕಾರ್ಕಳ	ಪ್ರಿನ್ಸಿಪಲ್ ಹಿಂದಿ	30-06-2002 14-06-1994	ನಿವೃತ್ತಿ ವರ್ಗಾವಣೆ
2.	ಸರ್ಕಾರಿ ಪದವಿ ಪೂರ್ವ ಕಾಲೇಜು ಬೆಳ್ಮಣ್ಣು	ಕನ್ನಡ ಅರ್ಥಶಾಸ್ತ್ರ ವಾಣಿಜ್ಯಶಾಸ್ತ್ರ ರಾಜ್ಯಶಾಸ್ತ್ರ	24-06-1994 04-06-1994 18-08-2000 14-06-1994	ಬಡ್ತಿಯಿಂದ ವರ್ಗಾವಣೆಯಿಂದ ಬಡ್ತಿಯಿಂದ ಪ್ರಾರಂಭದಿಂದ
3.	ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಬ್ರಿ	ಹಿಂದಿ ಇತಿಹಾಸ ಗಣಿತಶಾಸ್ತ್ರ ಜೀವಶಾಸ್ತ್ರ	03-06-1992 03-08-1997 17-06-2003 28-06-1998	ವರ್ಗಾವಣೆಯಿಂದ ವರ್ಗಾವಣೆಯಿಂದ ವರ್ಗಾವಣೆಯಿಂದ ವರ್ಗಾವಣೆಯಿಂದ
4.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬೈಲೂರು	ಕನ್ನಡ ಇತಿಹಾಸ ಅರ್ಥಶಾಸ್ತ್ರ ರಾಜ್ಯಶಾಸ್ತ್ರ	31-01-2002 31-07-1997 29-06-2002 30-06-1996	ನಿವೃತ್ತಿ ವರ್ಗಾವಣೆಯಿಂದ ವರ್ಗಾವಣೆಯಿಂದ ನಿವೃತ್ತಿ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು ಮತ್ತು ಸ್ಥಳ	ಖಾಲಿ ಹುದ್ದೆಗಳ ವಿವರ		
		ವಿಷಯ	ಯಾವ ದಿನಾಂಕದಿಂದ	ಖಾಲಿಯಾದ ಬಗ್ಗೆ
5.	ಸರ್ಕಾರಿ ಪದವಿ ಪೂರ್ವ ಕಾಲೇಜು, ಮುನಿಯಾಲು	ಪ್ರಿನ್ಸಿಪಲ್	01–04–2004	ನಿವೃತ್ತಿಯಿಂದ
		ಇಂಗ್ಲೀಷ್	21–06–2001	ಪ್ರಾರಂಭದಿಂದ
		ಇತಿಹಾಸ	23–03–1991	ಪ್ರಾರಂಭದಿಂದ
		ಸಮಾಜಶಾಸ್ತ್ರ	17–06–1999	ವರ್ಗಾವಣೆಯಿಂದ
		ರಾಜ್ಯಶಾಸ್ತ್ರ	23–03–1991	ಪ್ರಾರಂಭದಿಂದ
6.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬಜಗೋಳಿ	ಪ್ರಿನ್ಸಿಪಲ್	29–08–2002	ವರ್ಗಾವಣೆಯಿಂದ
		ಕನ್ನಡ	12–10–2000	ವರ್ಗಾವಣೆಯಿಂದ
		ಇಂಗ್ಲೀಷ್	----	ಪ್ರಾರಂಭದಿಂದ
		ಇತಿಹಾಸ	12–07–2002	ವರ್ಗಾವಣೆಯಿಂದ
		ಅರ್ಥಶಾಸ್ತ್ರ	10–10–2004	ವರ್ಗಾವಣೆಯಿಂದ
		ಸಮಾಜಶಾಸ್ತ್ರ	20–06–2003	ವರ್ಗಾವಣೆಯಿಂದ
		ರಾಜ್ಯಶಾಸ್ತ್ರ	05–10–1993	ವರ್ಗಾವಣೆಯಿಂದ
7.	ಸರ್ಕಾರಿ ಪದವಿ ಪೂರ್ವ ಕಾಲೇಜು, ಪಳ್ಳಿ	ಪ್ರಿನ್ಸಿಪಾಲ್	23–10–1993	ನಿವೃತ್ತಿಯಿಂದ
		ಕನ್ನಡ	15–07–2003	ವರ್ಗಾವಣೆಯಿಂದ
		ಇಂಗ್ಲೀಷ್	31–05–2002	ವರ್ಗಾವಣೆಯಿಂದ
		ಅರ್ಥಶಾಸ್ತ್ರ	15–07–2003	ವರ್ಗಾವಣೆಯಿಂದ
		ರಾಜ್ಯಶಾಸ್ತ್ರ	----	ಪ್ರಾರಂಭದಿಂದ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು ಮತ್ತು ಸ್ಥಳ	ಖಾಲಿ ಹುದ್ದೆಗಳ ವಿವರ		
		ವಿಷಯ	ಯಾವ ದಿನಾಂಕದಿಂದ	ಖಾಲಿಯಾದ ಬಗ್ಗೆ
8.	ಸರ್ಕಾರಿ ಪದವಿ ಪೂರ್ವ ಕಾಲೇಜು, ಹುಕ್ಕೇರಿ	ಫಿಸಿಷಲ್	30–06–2002	ಸರ್ಕಾರದಿಂದ
		ಕನ್ನಡ	30–04–2001	ನಿವೃತ್ತಿಯಿಂದ
		ಇಂಗ್ಲೀಷ್	30–06–1994	ಪ್ರಾರಂಭದಿಂದ
		ಇತಿಹಾಸ	30–06–1999	ಸರ್ಕಾರದಿಂದ
		ಮಾಣಿಜ್ಯಶಾಸ್ತ್ರ[1]	30–06–2002	ಸರ್ಕಾರದಿಂದ
		ಸಮಾಜಶಾಸ್ತ್ರ[1]	30–06–2000	ಸರ್ಕಾರದಿಂದ
		ರಾಜ್ಯಶಾಸ್ತ್ರ[1]	30–06–1999	ನಿವೃತ್ತಿಯಿಂದ
9.	ಸರ್ಕಾರಿ ಪದವಿ ಪೂರ್ವ ಕಾಲೇಜು, ಸಾಣಾಪುರ	ಕನ್ನಡ	04–01–1994	ಪ್ರಾರಂಭದಿಂದ
		ಇಂಗ್ಲೀಷ್	04–01–1994	ಪ್ರಾರಂಭದಿಂದ
		ಇತಿಹಾಸ	05–07–2001	ಸರ್ಕಾರದಿಂದ

(ಸದನವು 4 ಗಂಟೆ 45 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಶ್ರೀ ಕೆ. ರಘುಪತಿ ಭಟ್ (ಮಾನ್ಯ ಸುನೀಲ್ ಕುಮಾರ್ ಅವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಇವತ್ತು ಉಡುಪಿ ಜಿಲ್ಲೆಯಲ್ಲಿ ಇರುವಂಥ ಪ್ರಾಯಶಃ ಇಡೀ ರಾಜ್ಯದಲ್ಲಿರುವಂಥ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ಹುದ್ದೆ ಬಹಳಷ್ಟು ಖಾಲಿ ಇವೆ. ಇವರು ಕೊಟ್ಟಂಥ ಅಂಕಿ ಅಂಶಗಳ ಪ್ರಕಾರ ಕಾರ್ಕಳ ತಾಲ್ಲೂಕಿನಲ್ಲಿಯೇ ಏಳು ಕಡೆಗಳಲ್ಲಿ ನಾಲ್ಕು ಕಡೆ ಪ್ರಿನ್ಸಿಪಾಲರು ಇಲ್ಲದಿರುವ ಪರಿಸ್ಥಿತಿ ಇದೆ. ಇದನ್ನು ಯಾವಾಗ ತುಂಬಿಸಿ ಕೊಡಲಾಗುವುದು ಎನ್ನುವುದಕ್ಕೆ ಯಾವುದೇ ಸ್ಪಷ್ಟವಾದ ಉತ್ತರವನ್ನು ಕೊಡಲಿಲ್ಲ. ಇದನ್ನು ಎಷ್ಟು ಸಮಯದೊಳಗೆ ತುಂಬಿಸಿ ಕೊಡಲಾಗುವುದು ಎಂದು ಕೇಳುತ್ತೇನೆ. ಇದು ಕೇವಲ ಕಾರ್ಕಳದಲ್ಲಿ ಮಾತ್ರವಲ್ಲ ನಮ್ಮ ಉಡುಪಿ ಕ್ಷೇತ್ರದಲ್ಲಿಯೂ ಈ ಸಮಸ್ಯೆ ಇದೆ. ಬಜಗೋಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಇಲ್ಲದೆ ಇರುವುದರಿಂದ ಮೊನ್ನೆ ಕೆಲವರಿಗೆ ಪಿಯುಸಿ ವಿದ್ಯಾರ್ಥಿಗಳಿಗೆ ಹಾಲ್ ಟಿಕೇಟ್ ಸಿಗದಿದ್ದಂಥ ಪರಿಸ್ಥಿತಿ ಬಂದಿತ್ತು. ಆದುದರಿಂದ, ಅಂಥ ಮಕ್ಕಳ ಬೇಡಿಕೆ ಇದೆ. ಅಂಥವರಿಗೆ ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ನೀವು ಅವಕಾಶ ಕೊಡಬೇಕು. ಏಕೆಂದರೆ, ಇದು ಸರ್ಕಾರದಿಂದ ಅಲ್ಲಿ ಪ್ರಿನ್ಸಿಪಾಲ್ ಇಲ್ಲದೇ ಆಗಿರುವಂಥ ತೊಂದರೆ, ಆದುದರಿಂದ ಪದವಿ ಪೂರ್ವ ಕಾಲೇಜುಗಳಲ್ಲಿ, ನಮ್ಮ ಜಿಲ್ಲೆಗಳಲ್ಲಿ ಏನಾಗುತ್ತದೆ ಎಂದರೆ, ಶಿಕ್ಷಣದಲ್ಲಿ ಬಹಳ ಸ್ಪರ್ಧೆಯಿರುವಂಥ ಜಿಲ್ಲೆ ನಮ್ಮದು, ಖಾಸಗಿ ಕಾಲೇಜುಗಳು ಜಾಸ್ತಿ ಇವೆ, ಅಂಥ ಸಂದರ್ಭದಲ್ಲಿ ಸರ್ಕಾರಿ ಕಾಲೇಜಿನಲ್ಲಿ ಒಳ್ಳೆಯ ವಿದ್ಯಾರ್ಥಿಗಳು ಬರಬೇಕಾದರೆ ನಾವು ಆ ಕಾಲೇಜುಗಳಲ್ಲಿ ಉಪನ್ಯಾಸಕರುಗಳನ್ನು ಇಡಬೇಕಾಗಿದೆ. ನಾವು ಕಾಲೇಜು ಅಭಿವೃದ್ಧಿ ಸಮಿತಿ ಎಂದು ಮಾಡಿಕೊಳ್ಳುತ್ತೇವೆ. ಅದರಂತೆ ಶಾಲಾ ಅಭಿವೃದ್ಧಿ ಸಮಿತಿ ಎಂದು ಮಾಡಿಕೊಳ್ಳುತ್ತೇವೆ. ಗೌರವ ಶಿಕ್ಷಕರನ್ನು ನೇಮಿಸಿಕೊಂಡು ನಾವು ಕಾಲೇಜುಗಳನ್ನು ನಡೆಸುವಂಥ ಸಂದರ್ಭ ಇದೆ. ನಮ್ಮ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಗೌರವ ಶಿಕ್ಷಕರನ್ನು ನೇಮಿಸಿದ್ದಕ್ಕೆ ಶೇಕಡ 55 ಪರ್ಸೆಂಟಿಗಿಂತ ಹೆಚ್ಚು ಅಂಕ ಇದ್ದಂಥ ಉಪನ್ಯಾಸಕರುಗಳಿಗೆ ಸರ್ಕಾರದಿಂದ ಅದನ್ನು ವಾಪಸ್ ಕೊಡುವಂಥ ವ್ಯವಸ್ಥೆ ಪ್ರಥಮ ದರ್ಜೆ ಕಾಲೇಜಿನಲ್ಲಿದೆ. ಅದನ್ನು ನಮ್ಮ ಪದವಿ ಪೂರ್ವ ಕಾಲೇಜುಗಳಲ್ಲಿ ಮಾಡುವುದಕ್ಕೆ ಸರ್ಕಾರ ಬದ್ಧ ಇದೆಯೇ? ನಾವು 55 ಪರ್ಸೆಂಟ್‌ಗಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಗೌರವ ಶಿಕ್ಷಕರನ್ನು ನೇಮಕ ಮಾಡಿದರೆ, ಅಂಥ ಶಿಕ್ಷಕರಿಗೆ, ಅದನ್ನು ಕಾಲೇಜಿಗೆ ವಾಪಸ್ ಕೊಡುವಂಥ ವ್ಯವಸ್ಥೆ ಸರ್ಕಾರದಿಂದ ಮಾಡಬಹುದಾ? ಎಂದು ನಾನು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ನಮ್ಮ ರಾಜ್ಯದಲ್ಲಿ ಒಟ್ಟು 762 ಟೀಚರ್ಸ್ ಹುದ್ದೆಗಳು ಖಾಲಿ ಇವೆ. ಕಾರ್ಕಳದಲ್ಲಿ ಸುಮಾರು 9 ಕಾಲೇಜಿನಲ್ಲಿ ಶೇಕಡ 50ರಷ್ಟು ಲೆಕ್ಚರರ್ಸ್ ಇಲ್ಲ. ನಾವು ಈಗ 399 ಪ್ರೌಢ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುತ್ತಿದ್ದೇವೆ. ಇದರ ಜೊತೆಗೆ ಅರೆಕಾಲಿಕ ಉಪನ್ಯಾಸಕರ ವಿಲೀನ, ಇದೆಲ್ಲ ಆದರೆ ಬಹುತೇಕವಾಗಿ 762ರಲ್ಲಿ ಎಲ್ಲಾ ಕಡೆ ನಾವು ಭರ್ತಿ ಮಾಡಬಹುದು. ಉಳಿದಿರತಕ್ಕಂಥದ್ದು ನಾವು ಎಫ್‌ಡಿ ಗೆ ಕಳುಹಿಸಿದ್ದೇವೆ. ಅದನ್ನು ತೆಗೆದುಕೊಂಡು ನಾವು ಮಾಡುತ್ತೇವೆ. ಒಟ್ಟಿನಲ್ಲಿ ಪ್ರಿನ್ಸಿಪಾಲ್ ಇಲ್ಲದೇ ಶಾಲೆ ಆಗಲಿ ಕಾಲೇಜು ಆಗಲಿ ಅವುಗಳನ್ನು ನಡೆಸುವುದಕ್ಕೆ ಸರಿಯಿರುವುದಿಲ್ಲ.

ಆದುದರಿಂದ, ಜೂನ್ ಫಸ್ಟ್‌ಗೆ ಕಾಲೇಜು ಪ್ರಾರಂಭವಾಗುವುದಕ್ಕಿಂತ ಮುಂಚೆ ಅಲ್ಲಿ ಪ್ರಿನ್ಸಿಪಾಲ್ಸ್ ಈ ಹುದ್ದೆಗಳನ್ನು ಭರ್ತಿ ಮಾಡುವುದು, ಎಲ್ಲಾ ಕೂಡ ಮಾಡಿ ಕೊಡೋಣ. ಹಾಗೆಯೇ ಎಸ್‌ಎಸ್‌ಎಲ್‌ಸಿ ನಲ್ಲಿ ಯಾವ ರೀತಿಯಲ್ಲಿ ಫೇಲ್ ಆದವರಿಗೆ ಮತ್ತೆ ಯಾವ ರೀತಿ ಇನ್ನೊಂದು ಅವಕಾಶ ಕೊಡುತ್ತೇವೆಯೋ ಹಾಗೆಯೇ ಪಿಯುಸಿನಲ್ಲಿ ಕೂಡ ಮಾಡುವುದಕ್ಕೆ ನಾವು ಈ ಸಾರಿ ಇಂಟ್ರಡ್ಯೂಸ್ ಮಾಡುತ್ತಿದ್ದೇವೆ.

ಶ್ರೀ ಕೆ. ರಘುಪತಿ ಭಟ್: ಇಲ್ಲಿ ಸುಮಾರು 14 ವರ್ಷಗಳಿಂದ ಬಾಕಿ ಇರುವಂಥದ್ದು ಇದೆ. ನಾನು ಕೇಳಿದ ಪ್ರಶ್ನೆ ಏನೆಂದರೆ, ನಾವೇ ಇವತ್ತು ಕಾಲೇಜು ಅಭಿವೃದ್ಧಿ ಸಮಿತಿಯಿಂದ ನೇಮಕ ಮಾಡಿಕೊಂಡರೆ, ಅಂಥ ಗೌರವ ಶಿಕ್ಷಕರಿಗೆ, ಈಗೇನು ಪ್ರಥಮ ದರ್ಜೆ ಕಾಲೇಜಿನಲ್ಲಿ 55 ಪರ್ಸೆಂಟ್‌ಗಿಂತ ಹೆಚ್ಚು ಅಂಕ ಇದ್ದಂಥವರನ್ನು ನೇಮಕ ಮಾಡಿಕೊಂಡರೆ ಸರ್ಕಾರದವರೇ ಕಾಲೇಜಿಗೆ ಕೊಡುವಂಥ ವ್ಯವಸ್ಥೆ ಇದೆ. ಇಂಥ ವ್ಯವಸ್ಥೆಯನ್ನು ಪದವಿ ಪೂರ್ವ ಕಾಲೇಜಿನಲ್ಲಿ ಮಾಡಿಕೊಂಡರೆ ಸರ್ಕಾರದಿಂದ ಕೊಡಿಸುತ್ತೀರಾ?

ಶ್ರೀ ರಾಮಲಿಂಗಾರೆಡ್ಡಿ: ಎಫ್‌ಡಿಯಲ್ಲಿ ಸ್ವಲ್ಪ ಲೇಟಾಗುತ್ತಿದೆ ಅದನ್ನು ಫಾಲೋ ಮಾಡಿ ಅದನ್ನು ಆದಷ್ಟು ಬೇಗನೆ ಮಾಡಿಸಿ ಕೊಡುತ್ತೇವೆ. ಗೌರವ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ಬೇಡ, ರೆಗ್ಯೂಲರ್ ಆಗಿಯೇ ಮಾಡಿಕೊಂಡು ಬಿಡೋಣ, ಅಲ್ಲಿ ಸ್ವಲ್ಪ ಲೇಟಾಗಿದೆ, ಫಾಲೋ ಮಾಡಿ ಆದಷ್ಟು ಬೇಗನೆ ಮಾಡಿಸಿ ಕೊಡುತ್ತೇವೆ.

ಶ್ರೀ ಕೆ. ರಘುಪತಿ ಭಟ್: ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಇವತ್ತು ಪೂರ್ಣಾವಧಿಯ ಡಿಡಿಪಿಐ ಇಲ್ಲ, ಪ್ರಚಾರದಲ್ಲಿರುವ ಡಿಡಿಪಿಐ ಅನ್ನು ನಮಗೆ ಕೊಟ್ಟಿರುತ್ತೀರಿ. ಅದಕ್ಕೆ ನಮಗೆ ಪೂರ್ಣಕಾಲಿಕ ಡಿಡಿಪಿಐಯನ್ನು ಕೊಡಬೇಕೆಂದು ಕೋರುತ್ತೇನೆ. ಮತ್ತೊಂದು ವಿಚಾರ ಏನೆಂದರೆ, ಇವತ್ತು ಚಾರ್ಜ್ ಕೊಟ್ಟಂಥವರು. 84ರಲ್ಲಿ ಬಿಇಓ ಆದಂಥವರನ್ನು ಬಿಟ್ಟು 94ರಲ್ಲಿ ಬಿಇಓ ಆದಂಥವರು ಅಂದರೆ 10

ವರ್ಷ ಕಡಿಮೆ ಸೇವಾವಧಿ ಇರುವಂಥವರಿಗೆ ಚಾರ್ಜ್ ಕೊಟ್ಟಿದ್ದಾರೆ. ಇದರಿಂದ ಶಿಕ್ಷಣದ ವ್ಯವಸ್ಥೆಗೆ ಅಲ್ಲಿ ತೊಂದರೆ ಬರುತ್ತದೆ.

ಶ್ರೀ ರಾಮಲಿಂಗಾರೆಡ್ಡಿ: ಇವರು ಇದೆಲ್ಲವನ್ನು ಈಗ ಮಾತನಾಡುತ್ತಿದ್ದಾರೆ. ನಿನ್ನೆ ಕೂಡ ಅವರು ಹೇಳಿದ್ದಾರೆ. ನಾನು ಆ ಬಗ್ಗೆ ಗಮನ ಹರಿಸುತ್ತೇನೆ.